## ಇಲ್ಲಿಯವರೆಗೆ



ರಘುನಾಥ ದೇಶ್ವಂತರು ಹಾಗೂ ಅವರ ಮೂವರು ಮಕ್ಕಳ ಪರಿಧಿಯಲ್ಲಿ ತಮ್ಮ ಪೂರ್ವಿಕರ ಆಸ್ತಿಯ ಹಕ್ಕು ಬರುತ್ತದೆ. ಅದರಲ್ಲಿ ಹಿರಿಯ ಮಗ ವಾಮನ ತನಗೆ ಆಸ್ತಿಯೇನೂ ಬೇಡ ಎಂದರೆ ದೇಶ್ವಂತರ ಎರಡನೆ ಮಗ ಪಾಂಡುರಂಗ ಹಾಗೂ ಮೂರನೆ ಮಗ ಶಾಂತಾರಾಮ ಆಸ್ತಿಯ ಹಕ್ಕಿಗೆ ಬಾಧ್ಯಸ್ಥರಾಗುತ್ತಾರೆ. ಇವರದು ದೊಡ್ಡ ವಂಶವಾಗಿದ್ದು, ಖರ್ಚು ವೆಚ್ಚವೂ ಹೆಚ್ಚೇ.

ಈ ಮಧ್ಯೆ ನಿರ್ಮಾಪಕ ನಾಯ್ಡು ದೇಶ್ವಂತರ ಮನೆಗೆ ಬರುತ್ತಾನೆ. ಮನೆಯ ಗೇಟು ದಾಟಿ ಒಳಬಂದಾಗ ಅಡುಗೆಯಾತ ದೇವಣ್ಣ ಉಪಚರಿಸಿ ದೇಶ್ವಂತರ ಬಳಿ ಕರೆದುಕೊಂಡು ಹೋಗುತ್ತಾನೆ. ದೇವಣ್ಣ ಕಾಫಿ, ಅವಲಕ್ಕಿ ಕೊಟ್ಟು ಸತ್ಕರಿಸಿದ ಬಳಿಕ ದೇಶ್ವಂತರು ತಮ್ಮ ಕುಟುಂಬ ಸದಸ್ಯರನ್ನು ಒಬ್ಬೊಬ್ಬರನ್ನಾಗಿ ನಾಯ್ಡುಗೆ ಪರಿಚಯಿಸುತ್ತಾರೆ. ಒಂದು ಟೀವಿ ಧಾರಾವಾಹಿ ಚಿತ್ರೀಕರಣದ ಬಗ್ಗೆ ದೇಶ್ವಂತರಿಗೆ ನಾಯ್ಡು ವಿವರಿಸುತ್ತಾರೆ. ಮುಂದಿನ ಸೋಮವಾರ ಶಿರಸಿಯಲ್ಲಿ ಚಿತ್ರೀಕರಣ ಆರಂಭವಾಗುತ್ತದೆ. ಶಿರಸಿಯ ಮಾರಿಕಾಂಬಾ ದೇವಾಲಯದಲ್ಲಿ, ಮಧುಕೇಶ್ವರನ ಸನ್ನಿಧಿಯಲ್ಲಿ ಪೂಜೆ ಮುಗಿಸಿಕೊಂಡು ಬರುತ್ತಾರೆ. ಸಿನಿವ್ಯಾನು, ಕ್ಯಾಮೆರಾ, ಮೇಕಪ್‌ಮನ್ ಎಲ್ಲರೂ ಸಿದ್ಧರಾಗುತ್ತಾರೆ. ಚಂದನಿಕಾ, ಗೋಪಾಲರಾವ್ ನಾಯ್ಡು ಕಾರಿನಿಂದಿಳಿದು ಬರುತ್ತಾರೆ. ಸೀರಿಯಲ್ ಶೂಟಿಂಗ್ ಶುರುವಾಗುತ್ತದೆ.

ಅದು ದಿನಾ ಸಿಗಬಹುದು ನಿಮಗೆ!' ನಕ್ಕ. ಆಮೇಲೆ 'ಚೇಷ್ಟೆಗೆ ಹೇಳಿದೆ. ನೀವು ಸಿನಿಮಾದವರು. ನದಿ, ಸಮುದ್ರ, ಹಿಮಾಲಯ, ಬೇರೆ ಬೇರೆ ದೇಶ ಎಲ್ಲಾ ಶೂಟಿಂಗ್‌ನಲ್ಲಿ ಪದೇ ಪದೇ ನೋಡತಾನೆ ಇರತೀರಿ. ಇದ್ಯಾವ ಅಪರೂಪ ನಿಮಗೆ?'

'ನೋಡಿ, ನನ್ನನ್ನ ಯಾವುದೊ ಸ್ಟಾರ್ ಅಂತ ದಯಮಾಡಿ ನೋಡ್ಬೇಡಿ. ಖುಷಿ ಅನಿಸಲ್ಲ.'

ಅಚ್ಚರಿಯಾಯಿತು ಆನಂದನಿಗೆ. ಮಾತು ಬದಲಿಸಲು 'ನೆಲ್ಲಿಕಾಯಿಯಿನ್ನೂ ಬೆಳೆದಿಲ್ಲ. ಇಲ್ಲದಿದ್ರೆ ತಿನಿಸ್ತಿದ್ದೆ' ಅಂದ ಪಕ್ಕದಲ್ಲೆಲ್ಲ ಇದ್ದ ನೆಲ್ಲಿಗಿಡಗಳನ್ನು ನೋಡುತ್ತಾ. ಅತ್ತ ನೋಡಿದವಳು 'ಅಬ್ಬ! ಎಷ್ಟೆಲ್ಲಾ ಇದೆ. ಅವತ್ತು ಗಮನಿಸಲೇ ಇಲ್ಲ. ಬೆಳೀದಿದ್ರು ಪರವಾಗಿಲ್ಲ, ರುಚಿ ನೋಡೋಣರೀ, ಪ್ಲೀಸ್...' ದನಿಯಲ್ಲಿ ರಸ ಸುರಿಸುತ್ತಾ, ಶಾಲೆಗೆ ಹೋಗುವ ಹುಡುಗಿಯಂತೆ ಕರಡದಲ್ಲಿ ಕಾಲು ಹಾಕುತ್ತಾ ಹೊರಟೇಬಿಟ್ಟಳು. ಬೆರಗಿಂದ ಒಂದುಕ್ಷಣ ನಿಂತವ 'ತಡೀರಿ, ಹೊಂಡ ದಿಣ್ಣೆಯಿರತದೆ, ಬಿದ್ದುಹೋದೀರ' ಅನ್ನುತ್ತಾ ಹಿಂದೆ ಹೋದ. ಗಿಡದ ಒಂದು ಟೊಂಗೆಯನ್ನ ಬಾಗಿಸಿ ಕಾಯಿ ಕಿತ್ತುಕೊಳ್ಳಲು ಅನುವು ಮಾಡಿಕೊಟ್ಟ. ಅವಳು ಒಂದು ಕಾಯನ್ನು ಗಬಕ್ಕನೆ ಬಾಯಿಗೆ ಹಾಕಿ ಜಗಿದು, ಅದರ ವಿಪರೀತ ಒಗರಿಗೆ ಮುಖವನ್ನು ಕಿವಿಚುತ್ತ, ಆದರೂ ಬಿಡದೆ ಆಸ್ವಾದಿಸುತ್ತಿದ್ದಳು. ಇಂಥದ್ದೊಂದನ್ನು ಮೊದಲ ಬಾರಿ ಕಂಡವ ಅವಳನ್ನೆ ನೋಡುತ್ತ ನಿಂತುಬಿಟ್ಟ. ತಾನು ಚಿಕ್ಕವನಿದ್ದಾಗ ಮಾಡುತ್ತಿದ್ದುದು ನೆನಪಾಯಿತು.

'ಈಗ ನೀರು ಕುಡಿದರೆ ಸಿಹಿ ಸಿಹಿ ಅನಿಸತದೆ; ಅದರೆ ಇಲ್ಲಿ ನೀರಿಲ್ಲ. ಹವೆಯನ್ನ ಬಾಯಿಂದ ಒಳಗೆಳೆದುಕೊಳ್ಳಿ ಅದೂ ಸಿಹಿಯಾಗಿರತದೆ' ಅಂದವನಿಗೆ ಒಂದುಕಾಯಿ ಕೊಟ್ಟಳು. ಅದನ್ನು ಕಚ್ಚಿ ಬಾಯನ್ನು ಚೂಪು ಮಾಡಿ ಹವೆಯೆಳೆದುಕೊಂಡು ತೋರಿಸಿದ. ಅವಳೂ ಹಾಗೆ ಮಾಡಿ 'ಹೌದು, ಗಾಳೀನು ಸಿಹಿ' ಅಂತ ನಕ್ಕಳು. ಮತ್ತೆ ಕಾಲುದಾರಿಯಲ್ಲಿ ಮುಂದುವರಿದು ತಗ್ಗಿಗಿಳಿದು ನದಿಯ ಪಾತ್ರಕ್ಕೆ ಬಂದರು. 'ಅವತ್ತು ಬಂದಂತೇ ನನ್ಹಿಂದೆ ಬನ್ನಿ' ಅಂತ ಹೊರಟವ ಅವಳು ತಡವರಿಸುವುದು ಕಂಡು ನಿಂತ. ಇವತ್ತವಳು ಸೀರೆಯುಟ್ಟಿದ್ದಳು. ತೋಯಿಸಿಕೊಂಡರೆ ಓಡಾಡೋದು ಕಷ್ಟ. ತನ್ನೆದುರು ಮೊಳಕಾಲವರೆಗೆ ಸೀರೆ ಎತ್ತುವ, ಒಂದು ಕೈಯಲ್ಲಿ ಎತ್ತಿ ಹಿಡಿದು ನೀರಲ್ಲಿ ಸಮತೋಲ ಸಾಧಿಸುವ ತೊಂದರೆ ಅರಿವಾಗಿ 'ನಾನು ಹೆಜ್ಜೆಯಿಟ್ಟಲ್ಲೇ ಇಡುತ್ತ ಬನ್ನಿ. ಒಂದು ಕೈ ಕೊಡಿ' ಅಂದವ, ಎದುರು ದಂಡೆಯ ಕಡೆ ಮುಖ ಮಾಡಿಕೊಂಡೆ ಬಲಗೈಯನ್ನು ಹಿಂದೆ ಚಾಚಿದ. ಒಂದು ಕೈಯಲ್ಲಿ ಸೀರೆಯೆತ್ತಿ ಹಿಡಿದುಕೊಂಡು ಇನ್ನೊಂದು ಕೈಯನ್ನು ಆನಂದನ ಕೈಯಲ್ಲಿಟ್ಟು ಅವನ ಹಿಂದೆ ನದಿ ದಾಟಿದಳು.

'ಇನ್ನೆಂಟು ದಿನ, ಗದ್ದೆ ಕೊಯ್ದು ಬಣವೆಯೊಟ್ಟಬೇಕು' ಅಂದ ಗದ್ದೆಯನ್ನು ನಿರೀಕ್ಷಿಸುತ್ತ.

'ನೀವಿಲ್ಲಿ ಮೂರು ಬೆಳೆ ತೆಗೀತೀರೇನೊ ಅಲ್ವ?' ಮೆಚ್ಚುಗೆಯಿತ್ತು ಅವಳ ದನಿಯಲ್ಲಿ.

'ಮಳೆಗಾಲ್ದಲ್ಲಿ ಈ ಬಡಕಲು ನದಿ ದಂಡೆ ಮೀರಿ ಉಕ್ಕಿ, ಒಮ್ಮೊಮ್ಮೆ ಈ ಬಯಲನ್ನೆಲ್ಲಾ ವಾರಗಟ್ಲೆ ಮುಳುಗಿಸಿಡತದೆ. ಬೇಸಿಗೇಲಿ ಕೊಳ್ಳದಲ್ಲಿ ಹರಿಯೋ ನೀರು ಮೇಲೆತ್ತಿ ಜಮೀನಲ್ಲಿ ನಿಲ್ಲಿಸೋದು ಕಷ್ಟ. ಅಲ್ಲದೆ ಸಾಕೂ ಅಗೋದಿಲ್ಲ. ಕದಂಬರ ಅರಸೊತ್ತಿಗೇಲಿ ಇದೇ ನದಿ ನೀರನ್ನು ಭದ್ರತೆಗೆ ಕೋಟೆ ಸುತ್ತ ಹರಿಸ್ತಿದ್ದರಂತೆ. ರಾಜಧಾನಿಗೆ 'ಜಲದುರ್ಗ' ಅಂತಲೂ ಹೆಸರಿತ್ತಂತೆ. ಹಳೇ ಕಡತಗಳಲ್ಲಿ ಅದೆಲ್ಲ ಇದೆ ಅಂತ ಅಜ್ಜ ಹೇಳತಿದ್ರು. ಆಗ ಹೆಚ್ಚು ಪ್ರಮಾಣದ ನೀರಿರತಿತ್ತೇನೋ. ಕಾಲಾಯ ತಸ್ಮೈ ನಮಃ' ಅಂದ. ಅವನಿಂದ ಅಷ್ಟು ದೂರ ಹಾಳಿಯಂಚಿನಲ್ಲಿ ನಿಂತವಳು ತನ್ಮಯಳಾಗಿ ಕೇಳುತ್ತಿದ್ದಳು. ಸೂರ್ಯ ಪಶ್ಚಿಮಕ್ಕಿಳಿಯುತ್ತ ಕೆಂಪಾಗುತ್ತಿದ್ದ. ಅವಳ ಹಿನ್ನೆಲೆಯಲ್ಲಿರುವ ಸೂರ್ಯ ಅವಳ ಆಕಾರದಂಚಿಗೆಲ್ಲ ಕುಂಕುಮ ಬಳಿದಿದ್ದ. ಚಿತ್ರದಂತೆ ಕಾಣುವ ಅವಳನ್ನು ಅಚ್ಚರಿಯಿಂದ ನೋಡಿದ. ಐದೂವರೆಯಡಿಯಿರಬಹುದೇನೋ. ಕಲಾತ್ಮಕವಾಗಿ ಸೀರೆಯುಟ್ಟವಳ ತಗ್ಗಾದ ನಡುವಿಂದ ಬಿಲ್ಲಿನಂತೆ ಉಬ್ಬಿ ಇಳಿಜಾರಾಗುತ್ತ ಕೆಳಗೆ ಸಾಗಿದೆ ರೇಖೆ. ನಡುವಿಂದ ಮೇಲೇರಿ ಅಗಲವಾಗುತ್ತ ದುಂಡಗಾದ ಭುಜದಮೇಲೆಲ್ಲ ಬಂಗಾರದ ಎಳೆಗಳಾದ ಕೂದಲು. ನೀಳಕುತ್ತಿಗೆ ಬಾದಾಮಿಯಾಕಾರದ ಮುಖದಲ್ಲಿ ಹೆಚ್ಚು ಸಮಯ ಗಾಂಭೀರ್ಯವೆ ಇರುವಲ್ಲಿ ಈಗಿರುವ ಮಂದಹಾಸ ಓಕುಳಿಯೊಂದಿಗೆ ಸ್ಪರ್ಧಿಸುತ್ತಿದೆ. ಬೇಂದ್ರೆಯವರ – ಮುಗಿಲ ಮಾರಿಗೆ ರಾಗರತಿಯ ರಂಗು... ಕವನ ನೆನಪಾಯಿತು. ಅವನು ತನ್ನನ್ನೆ ನೋಡುತ್ತಿದ್ದುದು ಲಕ್ಷ್ಯಕ್ಕೆ ಬಂದು ನಿಜಕ್ಕು ಚಂದನಿಕಾಳ ಮುಖ ಕೆಂಪಾಯ್ತು. ಗದ್ದೆಯನ್ನು ನೋಡುವಂತೆ ಅತ್ತ ತಿರುಗಿದಳು. ವಸ್ತುಸ್ಥಿತಿಗೆ ಬಂದ ಆನಂದ ಅವಳೇನೆಂದುಕೊಂಡಳೋ ಅಂತ ಕಸಿವಿಸಿಪಟ್ಟ.

'ನೀರಡಿಕೆಯಾಯ್ತೇನೋ. ಇಲ್ಲಿ ಸರಿಯಾದ ನೀರಿಲ್ಲ' ಮೌನ ಮುರಿಯಲು ಮಾತಾಡಿದ.

'ಇಲ್ಲ, ನಂಗೇನು ನೀರಡಿಕೆಯಾಗಿಲ್ಲ. ನೀರಿಲ್ಲ ಅಂದ್ರಲ್ಲ, ಹೊಳೆ ನೀರು ಕುಡೀಬಹುದಲ್ಲ?'

'ನಾವು ಶಾಲೆ ಮಕ್ಕಳಾಗಿದ್ದಾಗ, ಬೇಸಿಗೆ ರಜೆಯಲ್ಲಿ ಕಾಡಲ್ಲೆಲ್ಲ ಕವಳಿಹಣ್ಣು ಮುಳ್ಳುಹಣ್ಣು ಅಂತಾ ಅಲೀತಿದ್ದೆವು. ತಿಂದು, ಇದೇ ನದೀಲಿ ದನಗಳಂತೆ ಬಗ್ಗಿ ನೀರು ಹೀರುತಿದ್ದೆವು. ಇದು ರುಚಿಯಿದ್ರೂ ಬಟ್ಟೆ ತೊಳೀತಾರೆ, ದನ